# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1824 (2112) |
| ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 25.03.2026 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಜಮೀನುಗಳ ಅತಿಕ್ರಮಣ ಗುರುತಿಸಲು ಮತ್ತು ತೆರವುಗೊಳಿಸುವ ಬಗ್ಗೆ ರಚಿಸಲಾದ ಸಮಿತಿಗಳು ಎಷ್ಟು; ಸಮಿತಿಗಳಿಂದ ನೀಡಲಾದ ಶಿಫಾರಸುಗಳು ಎಷ್ಟು; ಅವುಗಳಲ್ಲಿ ಎಷ್ಟು ಶಿಫಾರಸ್ಸುಗಳನ್ನು ಸರ್ಕಾರ ಅನುಷ್ಠಾನಗೊಳಿಸಿದೆ; ಉಳಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸದಿದ್ದರೆ ಅದಕ್ಕೆ ಕಾರಣವೇನು; | ಸರ್ಕಾರಿ ಜಮೀನುಗಳ ಒತ್ತುವರಿ ಗುರುತಿಸಿ ಸಂರಕ್ಷಿಸಲು ಮಾರ್ಗೋಪಾಯಗಳನ್ನು ಸೂಚಿಸಲು ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನಮಂಡಲದ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು.<br><br>ಜಂಟಿ ಸದನ ಸಮಿತಿಯು, ಮಧ್ಯಂತರ ವರದಿಯ ಭಾಗ-1ನ್ನು ದಿನಾಂಕ:20.12.2006 ರಂದು ಹಾಗೂ ಭಾಗ-2ನ್ನು ದಿನಾಂಕ: 12.07.2007 ರಂದು ಮಂಡಿಸಲಾಗಿದೆ. ಶಿಫಾರಸ್ಸುಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಪ್ರಸ್ತುತ ಜಾರಿಯಲ್ಲಿ ಇರುವ ಕಂದಾಯ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರಿಗಳು ಎಷ್ಟು ಸರ್ಕಾರಿ ಜಮೀನಿನ ಅತಿಕ್ರಮಣವನ್ನು ಜಿಲ್ಲಾವಾರು ತೆರವುಗೊಳಿಸಿದ್ದಾರೆ; ಇಂದಿಗೂ ಬಾಕಿ ಇರುವ ಅತಿಕ್ರಮಣ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳನ್ನು ತೆರವುಗೊಳಿಸಲು ಸರ್ಕಾರವು ಯಾವುದೇ ಕಾಲಪರಿಧಿ (ನಿಗದಿಪಡಿಸಿರುವುದೇ; ಇದ್ದಲ್ಲಿ ಅದರ ವಿವರವೇನು: | ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

**ಸಂಖ್ಯೆ**: ಆರ್‌ಡಿ 99 ಎಲ್‌ಜಿಕ್ಯೂ 2026

(**ಕೃಷ್ಣ ಬೈರೇಗೌಡ**)
ಕಂದಾಯ ಸಚಿವರು

# ಶಿಫಾರಸ್ಸುಗಳು

## 1 ಒತ್ತುವರಿಗಳ ಬಗ್ಗೆ ವ್ಯವಹರಿಸಲು ವಿಶೇಷ ನ್ಯಾಯಾಲಯ:-

ಆಂಧ್ರ ಪ್ರದೇಶ ಸರ್ಕಾರವು, 1982ರಲ್ಲಿಯೇ ಆಂಧ್ರ ಪ್ರದೇಶ ಭೂಕಬಳಿಕೆ (ನಿಷೇಧ) ಅಧಿನಿಯಮವನ್ನು ಜಾರಿಗೆ ತಂದಿದ್ದು, ತನ್ಮೂಲಕ ಭೂ ಕಬಳಿಕೆದಾರರಿಗೆ ಮತ್ತು ಆ ನಿಟ್ಟಿನಲ್ಲಿ ಕುಮ್ಮಕ್ಕು ನೀಡುವವರಿಗೆ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಹೈದರಾಬಾದ್‌ನಲ್ಲಿ ಪ್ರತ್ಯೇಕ ವಿಶೇಷ ನ್ಯಾಯಾಲಯಗಳನ್ನು ಮತ್ತು ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಧಿಕರಣಗಳನ್ನು ರಚಿಸಿದೆ. ಯುಕ್ತ ಮಾರ್ಪಾಡುಗಳೊಂದಿಗೆ ಕರ್ನಾಟಕ ಸರ್ಕಾರವು ಸಹ ಕೂಡಲೇ ನಿವಾರಣಾತ್ಮಕ ಕ್ರಮಗಳೊಂದಿಗೆ ಇಂತಹ ಒಂದು ಶಾಸನವನ್ನು ರಚಿಸಬೇಕು. ಇಂತಹ ಒಂದು ಶಾಸನವನ್ನು ಸುಮಾರು 24 ವರ್ಷಗಳ ಹಿಂದೆಯೇ ಆಂಧ್ರ ಪ್ರದೇಶ ಸರ್ಕಾರವು ಜಾರಿಗೆ ತಂದಿದ್ದರಿಂದಲೇ ಹೈದರಾಬಾದನಂತಹ ನಗರದಲ್ಲಿ ಭೂಕಬಳಿಕೆಯನ್ನು ಬಹುಮಟ್ಟಿಗೆ ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗಿರುತ್ತದೆ.

ಬಹುತೇಕ ಪ್ರಭಾವಿ ವ್ಯಕ್ತಿಗಳಾಗಿರುವ ಮತ್ತು ಸಮಾಜದ ಶ್ರೀಮಂತ ವರ್ಗಗಳಿಗೆ ಸೇರಿರುವ ಒತ್ತುವರಿದಾರರು ಅನುಸರಿಸುವ ಸಾಮಾನ್ಯ ತಂತ್ರಗಳೆಂದರೆ, ಸಿವಿಲ್ ನ್ಯಾಯಾಲಯಗಳಿಂದ ಪ್ರಾರಂಭಿಸಿ ಸರ್ವೋಚ್ಚ ನ್ಯಾಯಾಲಯದವರೆಗೆ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡುವುದು ಅನೇಕ ಪ್ರಕರಣಗಳಲ್ಲಿ ಒಂದು ಸಿವಿಲ್ ನ್ಯಾಯಾಲಯವು, ಸರ್ಕಾರದ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಗೃಹ ಮಂಡಳಿಗಳಂಥಹ ಶಾಸನಬದ್ಧ ಸಂಸ್ಥೆಗಳ ಪರವಾಗಿ ಆದೇಶಗಳನ್ನು ಹೊರಡಿಸಿದ್ದಾಗ್ಯೂ, ಒತ್ತುವರಿದಾರರು ಇತರ ಕೆಲವು ಸದಸ್ಯರ ಹೆಸರಿನಲ್ಲಿ ಇತರ ನ್ಯಾಯಾಲಯಗಳಲ್ಲಿ ಅಥವಾ ಅದೇ ನ್ಯಾಯಾಲಯದಲ್ಲಿ ಮೂಲ ದಾವೆಗಳು ಅಥವಾ ನಿರ್ಬಂಧಾಜ್ಞೆ ದಾವೆಯನ್ನು ಸಲ್ಲಿಸುವುದು. ಆ ದಾವೆಗಳು ಸಹಾ ನ್ಯಾಯಾಲಯಗಳಿಂದ ಸಾಂದರ್ಭಿಕವಾಗಿ ಅಂಗೀಕೃತವಾಗುವುದು ಸಮಿತಿಯ ಗಮನಕ್ಕೆ ಬಂದಿದೆ. ಕರ್ನಾಟಕ ಗೃಹ ಮಂಡಳಿಗೆ ಸಂಬಂಧಿಸಿದ ಭೂಮಿಯ ಒತ್ತುವರಿದಾರರಿಂದ ರಿಟ್ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ವಜಾಗೊಳಿಸಿದ್ದಾಗ್ಯೂ, ಆ ಒತ್ತುವರಿದಾರರು ಕೆಳಹಂತದ ನಗರ ಸಿವಿಲ್ ನ್ಯಾಯಾಲಯದಿಂದ ನಿರ್ಬಂಧಾಜ್ಞೆ ಪಡೆದ ಪ್ರಕರಣವೊಂದಿದೆ. ಹತ್ತು ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲದಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುವ ಪ್ರಕರಣಗಳಿವೆ.

ಸಾರ್ವಜನಿಕರಿಗೆ ತೊಂದರೆ ಮತ್ತು ನಷ್ಟ ಉಂಟುಮಾಡುವಂಥಹ ನಿರರ್ಥಕ ವ್ಯಾಜ್ಯಗಳನ್ನು ತಡೆಯಲು ಒತ್ತುವರಿ ಪ್ರಕರಣಗಳಿಗಾಗಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದು ಅಗತ್ಯವಾಗಿದೆ. ಇದರಿಂದ ಅಂಥಹ ಎಲ್ಲಾ ಪ್ರಕರಣಗಳನ್ನು ಆ ವಿಶೇಷ ನ್ಯಾಯಾಲಯದ ಮುಂದೆ ಸಲ್ಲಿಸಲು ಅನುಕೂಲವಾಗುತ್ತದೆ. ಈ ನ್ಯಾಯಾಲಯದ ಆದೇಶಗಳ ಮೇಲೆ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬಹುದೆಂಬುದಕ್ಕೆ ಯಾವುದೇ ನಿರ್ಬಂಧವಿಲ್ಲ. ಆದರೆ ವಿಶೇಷ ನ್ಯಾಯಾಲಯದ ಸ್ಥಾಪನೆಯು ವಿವಿಧ ನ್ಯಾಯಾಲಯಗಳ ಮುಂದೆ ವಿವಿಧ ಅರ್ಜಿಗಳನ್ನು ದಾಖಲು ಮಾಡುವುದನ್ನು ಮತ್ತು ಪ್ರಕರಣಗಳು ದೀರ್ಘಕಾಲದಿಂದ ಇತ್ಯರ್ಥವಾಗದಿರುವ ವಿಳಂಬವನ್ನು ಕಡಿಮೆ ಮಾಡಬಹುದು.

**2 ಭೂ ಕಬಳಿಕೆದಾರರ ವಿರುದ್ಧ ಅಸ್ತಿತ್ವದಲ್ಲಿರುವ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ:-**

ಕರ್ನಾಟಕ ಕಳ್ಳ ಸಾಗಣೆದಾರರ, ಭೂ ಕಬಳಿಕೆದಾರರ ಇತ್ಯಾದಿ ಅಪಾಯಕಾರಿ ಚಟುವಟಿಕೆ ತಡೆಗಟ್ಟುವಿಕೆ ಅಧಿನಿಯಮ, 1985 ರಡಿಯಲ್ಲಿ ಕಾರ್ಯಗೊಳ್ಳಲು ಮುಂದಾಗಬೇಕು. ಈ ಅಧಿನಿಯಮದಡಿಯಲ್ಲಿ ಭೂ ಕಬಳಿಕೆದಾರ ಎಂದರೆ ಯಾವುದೇ ಸರ್ಕಾರದ, ಸ್ಥಳೀಯ ಸಂಸ್ಥೆಗಳ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಥವಾ ಕಟ್ಟಡ ನಿರ್ಮಾಣ ಮಾಡುವ ವ್ಯಕ್ತಿ ಮತ್ತು ಅಂತಹ ಅಕ್ರಮ ಕೃತ್ಯಕ್ಕೆ ಕುಮ್ಮಕ್ಕು ನೀಡುವ ಯಾವನೇ ವ್ಯಕ್ತಿ ಎಂದು ಪರಿಭಾಷಿಸಲಾಗಿದೆ. ಹೀಗೆ ಅಧಿನಿಯಮವು ಯಾರೇ ಭೂ ಕಬಳಿಕೆದಾರರನ್ನು ಮತ್ತು ಅಂತಹ ಭೂ ಕಬಳಿಕೆಗೆ ಕುಮ್ಮಕ್ಕು ನೀಡುವ ಸಾರ್ವಜನಿಕ ನೌಕರರು ಸೇರಿದಂತೆ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು ಅಂತಹವರನ್ನು ಒಂದು ವರ್ಷದವರೆಗೆ ಬಂಧನದಲ್ಲಿಡಬಹುದಾಗಿದೆ. ಈ ಅಧಿನಿಯಮವನ್ನು ಸಾಮಾನ್ಯವಾಗಿ ಗೂಂಡಾ ಅಧಿನಿಯಮವೆಂದೇ ಕರೆಯಲಾಗುತ್ತದೆ ಮತ್ತು ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇದರಡಿಯಲ್ಲಿ ರೂಢಿಗತ ಅಪರಾಧಿಗಳನ್ನು ಮತ್ತು ಕಳ್ಳ ಸಾಗಣೆದಾರರನ್ನು ಮಾತ್ರ ಬಂಧಿಸಲಾಗಿದೆ. ಒಂದು ವರ್ಷದವರೆಗೆ ಬಂಧಿಸುವ ತೀವ್ರ ಪರಿಣಾಮದ ಉಪಬಂಧವನ್ನು ಭೂ ಕಬಳಿಕೆದಾರರ ವಿರುದ್ಧವೂ ಸಹ ಅನ್ವಯಿಸಬೇಕು.

**3. ಭಾರತ ದಂಡಸಂಹಿತೆಯಡಿಯಲ್ಲಿ ಅಧಿಕೃತ ದಸ್ತಾವೇಜುಗಳ ಸುಳ್ಳು ಸೃಷ್ಟಿ ಮತ್ತು ಅವುಗಳ ನಾಶಪಡಿಸುವಿಕೆಗೆ ಅಧಿಕಾರಿಗಳು ಮತ್ತು ಸರ್ಕಾರಿ ನೌಕರರ ಮೇಲೆ ಕಾನೂನು ಕ್ರಮ ಜರುಗಿಸುವುದು.**

**ಪ್ರಕರಣ 197:-**

ಕಾನೂನಿಗನುಸಾರವಾಗಿ ಕೊಡತಕ್ಕದ್ದು ಅಥವಾ ಸಹಿ ಹಾಕತಕ್ಕದ್ದು ಎಂದು ಅಗತ್ಯಪಡಿಸಲಾದ ಯಾವುದೇ ಪ್ರಮಾಣ ಪತ್ರವನ್ನು ಅಥವಾ ಯಾವ ಸಂಗತಿಗೆ ಸಂಬಂಧಿಸಿ ಒಂದು ಪ್ರಮಾಣ ಪತ್ರವನ್ನು ಕಾನೂನಿಗನುಸಾರವಾಗಿ ಸಾಕ್ಷ್ಯವಾಗಿ ಸ್ವೀಕರಿಸಲಾಗುವುದೋ ಆ ಯಾವುದೇ ಸಂಗತಿಗೆ ಸಂಬಂಧಿಸಿದಂತಹ ಪ್ರಮಾಣ ಪತ್ರವನ್ನು, ಆ ಪ್ರಮಾಣ ಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳಾಗಿರುವುದೆಂದು ತಿಳಿದೂ ಅಥವಾ ನಂಬಿದ್ದೂ, ಅಂತಹ ಪ್ರಮಾಣ ಪತ್ರವನ್ನು ಯಾರೇ ವ್ಯಕ್ತಿಯು ಕೊಟ್ಟರೆ ಅಥವಾ ಅದಕ್ಕೆ ಸಹಿ ಹಾಕಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**ಪ್ರಕರಣ 198:-**

ಯಾರೇ ವ್ಯಕ್ತಿಯು ಒಂದು ಪ್ರಮಾಣ ಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳೆಂದು ತಿಳಿದಿದ್ದು, ಅಂಥಹ ಯಾವುದೇ ಪ್ರಮಾಣ ಪತ್ರವನ್ನು ಭ್ರಷ್ಟತೆಯಿಂದ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಪ್ರಯತ್ನಿಸಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**ಪ್ರಕರಣ 464:-**

ಸುಳ್ಳು ದಸ್ತಾವೇಜಿನ ರಚನೆ, ಸುಳ್ಳು ದಸ್ತಾವೇಜುಗಳು ಸುಳ್ಳು ಸೃಷ್ಟಿಗಾಗಿ ಮತ್ತು ಅಧಿಕೃತ ದಾಖಲೆಗಳನ್ನು ನಾಶಪಡಿಸಿದಕ್ಕಾಗಿ ಸರ್ಕಾರಿ ನೌಕರರ (ಮುನಿಸಿಪಲ್ ಅಧ್ಯಕ್ಷ

[illegible]

**4 ಈಗಿರುವ ಕಾನೂನುಗಳಿಗೆ ತಿದ್ದುಪಡಿ :-**

ಸರ್ಕಾರದ ಮತ್ತು ಸಾರ್ವಜನಿಕ ಸ್ವತ್ತುಗಳ ಒತ್ತುವರಿಗಳ ಕುರಿತು ವ್ಯವಹರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕಂದಾಯ ಇಲಾಖೆಗಳಿಗೆ ಸಂಬಂಧಿಸಿದ್ದು, ಪ್ರಸಕ್ತ ಕಾನೂನುಗಳಲ್ಲಿ ಹಲವಾರು ಉಪಬಂಧಗಳಿವೆ. ಆದರೆ ಈ ಉಪಬಂಧಗಳು ಕಾರಣ ಕೇಳಿ ನೋಟೀಸ್ ನೀಡುವುದಕ್ಕೆ ಅಥವಾ ಬೇಕಾದರೆ ಅಂಥಹ ಒತ್ತುವರಿಗಳನ್ನು ತೆರವುಗೊಳಿಸುವುದಕ್ಕೆ ಸೀಮಿತವಾಗಿವೆ. ಕೆರೆಯಂಗಳ ಪ್ರದೇಶ ಅಥವಾ ಸಾರ್ವಜನಿಕ ಸ್ವತ್ತುಗಳ ಒತ್ತುವರಿಗಳಂಥಹ ಹಲವು ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಯ ಒತ್ತುವರಿಯನ್ನು ಯಶಸ್ವಿಯಾಗಿ ತೆರವುಗೊಳಿಸಿದಾಗ್ಯೂ, ಕೂಡ, ಕೂಡಲೇ ಅದೇ ವ್ಯಕ್ತಿ ಅಥವಾ ಬೇರೆ ವ್ಯಕ್ತಿಗಳು ಆ ಭೂಮಿಯನ್ನು ಪುನಃ ಒತ್ತುವರಿ ಮಾಡಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಆದುದರಿಂದ ಈ ಪ್ರವೃತ್ತಿಯನ್ನು ತಡೆಯುವ ಸಲುವಾಗಿ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶ ನೀಡುವ ದಂಡನೀಯ ಉಪಬಂಧಗಳನ್ನು ರೂಪಿಸುವುದು ಅತ್ಯವಶ್ಯಕವಾಗಿದೆ. ಒಬ್ಬ ವ್ಯಕ್ತಿಯು ಭೂ ಒತ್ತುವರಿ ಮಾಡಿರುವುದು ಮತ್ತು ಸರ್ಕಾರಿ ನೌಕರರು ಇದಕ್ಕೆ ದುಷ್ಪ್ರೇರಣೆ ನೀಡಿರುವುದು ಸಾಬೀತಾದಾಗ 3 ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಪ್ರಕರೂಪದ ದಂಡನೀಯ ಉಪಬಂಧಕ್ಕೆ ಅವಕಾಶ ಕಲ್ಪಿಸಲು ಕಾನೂನು ಪ್ರಕಾರ ಸಾಧ್ಯತೆಯಿದೆ. ಜಾರಿಯಲ್ಲಿರುವ ವಿವಿಧ ಅಧಿನಿಯಮಗಳಡಿ ದಂಡನೀಯ ಉಪಬಂಧಗಳಿಗೆ ಅವಕಾಶ ಕಲ್ಪಿಸುವ ಒಂದು ವಿಧೇಯಕವನ್ನು ಸಿದ್ಧಪಡಿಸಿ, ವಿಧಾನ ಮಂಡಲದ ಮುಂದೆ ಮಂಡಿಸಬಹುದಾಗಿದೆ. ಮೂರು ವರ್ಷಗಳಿಗೆ ಮೀರದ ಕಾರಾವಾಸ ಶಿಕ್ಷೆಗಾಗಿ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಡಿ ಅವಕಾಶವಿರುವುದರಿಂದ ಕೇಂದ್ರ ಸರ್ಕಾರದ ಸಹಮತಿಯನ್ನು ಪಡೆಯುವುದು ಅಗತ್ಯವಿಲ್ಲ. ಅಂತಹ ತಿದ್ದುಪಡಿಯು ರಾಜ್ಯ ಸರ್ಕಾರದ ಸಕ್ಷಮತೆಯೊಳಗಿದ್ದು, ಅದು ಭೂ ಕಬಳಿಕೆದಾರರ ಮೇಲೆ ಯುಕ್ತ ಮತ್ತು ನಿರ್ಬಂಧಕ ಪರಿಣಾಮವನ್ನುಂಟು ಮಾಡುವುದು.

**5. ಸಾರ್ವಜನಿಕ ಆವರಣಗಳಿಂದ ಹೊರಹಾಕುವಿಕೆ ಅಧಿನಿಯಮದಡಿ ಕ್ರಮ:-**

ಸಾರ್ವಜನಿಕ ಆವರಣಗಳಿಂದ ಹೊರಹಾಕುವಿಕೆ ಅಧಿನಿಯಮದಡಿ ಸರ್ಕಾರ ಅಥವಾ ನಿಗಮಬದ್ಧ ಸಂಸ್ಥೆಯು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ತನ್ನ ಭೂಮಿ ಅಥವಾ ಕಟ್ಟಡದಿಂದ ಅನಧಿಕೃತ ಅನುಭೋಗದಾರನನ್ನು ಹೊರಹಾಕಲು ಉಪಬಂಧ ಕಲ್ಪಿಸಲಾಗಿದೆ. ಅಧಿಸೂಚಿತ ಅಧಿಕಾರಿಯು, ತನ್ನ ಮುಂದಿರುವ ದಸ್ತಾವೇಜುಗಳ ಆಧಾರದ ಮೇಲೆ ಮತ್ತು ಅನಧಿಕೃತ ಅನುಭೋಗದಾರನಿಗೆ ಯಥೋಚಿತ ನೋಟೀಸ್ ನೀಡಿದ ತರುವಾಯ, ಆ ಅನಧಿಕೃತ ಅನುಭೋಗದಾರನನ್ನು ಶೀಘ್ರವಾಗಿ ತೆರವುಗೊಳಿಸತಕ್ಕದ್ದು. ದೀರ್ಘ ಕಾಲದಿಂದ ಈ ಉಪಬಂಧ ಜಾರಿಯಲ್ಲಿದ್ದಾಗ್ಯೂ, ಕೆಲವೇ ಕೆಲವು ಇಲಾಖೆಗಳು ಮತ್ತು ನಿಗಮಬದ್ಧ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿ ಅಂಥಹ ಅಧಿಕಾರಿಗಳನ್ನು ಅಧಿಸೂಚಿಸಿವೆ ಮತ್ತು ಒತ್ತುವರಿ ತೆರವಿಗಾಗಿ ಕ್ರಮಕೈಗೊಂಡಿವೆ. ಆದ್ದರಿಂದ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಸಹಕಾರ ಇಲಾಖೆ ಮುಂತಾದವುಗಳಂಥಹ ಶಾಸನಾತ್ಮಕ ಸಂಸ್ಥೆಗಳ, ಸರ್ಕಾರಿ ಭೂಮಿ ಅಥವಾ ಸ್ವಾಧೀನಪಡಿಸಿಕೊಂಡ ಭೂಮಿ ಒತ್ತುವರಿಯಾಗಿದ್ದರೆ ಈ ಉದ್ದೇಶಕ್ಕಾಗಿ ಒಬ್ಬ ಅಧಿಕಾರಿಯನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ಗೊತ್ತುಪಡಿಸಿ ಸರ್ಕಾರ ಅಧಿಸೂಚನೆ ಹೊರಡಿಸುವುದು ಅತ್ಯಗತ್ಯವಾಗಿದೆ.

**6. ದಂಡ ಪ್ರಕ್ರಿಯಾ ಸಂಹಿತೆಯ 133ನೇ ಪ್ರಕರಣದಡಿ ಕ್ರಮ:-**

ಈ ಪ್ರಕರಣದಡಿ ಸಹ ಉಪ ವಿಭಾಗದ ದಂಡಾಧಿಕಾರಿ (ಉಪ ವಿಭಾಗದ ಉಪ ವಿಭಾಗಾಧಿಕಾರಿ) ಅಥವಾ ಜಿಲ್ಲಾ ದಂಡಾಧಿಕಾರಿ (ಕಂದಾಯ ಜಿಲ್ಲೆಯ ಜಿಲ್ಲಾಧಿಕಾರಿ) ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸಲು ಆದೇಶಗಳನ್ನು ಹೊರಡಿಸಬಹುದು. ಮೊದಲನೆಯದಾಗಿ ಒತ್ತುವರಿದಾರನಿಗೆ ಈ ಉಪಬಂಧದಡಿ ತಾನು ಒತ್ತುವರಿದಾರನಲ್ಲ ಎಂಬುದರ ಬಗ್ಗೆ ಪುರಾವೆ ಕೋರಿಸುವುದು ಆತನ ಜವಾಬ್ದಾರಿ ಮತ್ತು ಷರತ್ತುಬದ್ಧ ಆದೇಶವನ್ನು ನೀಡಬಹುದು. ಈ ಪ್ರಕರಣ ಸಾರ್ವಜನಿಕ ಉಪದ್ರವಕಾರಿ ಎಂದು ವಿವರಿಸಲಾಗಿದ್ದರೂ ಅಂಥಹ ಒತ್ತುವರಿಗಳನ್ನು ತೆರವುಗೊಳಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬಹುದು. ಈ ಉದ್ದೇಶಕ್ಕಾಗಿ ಇತರ ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳು ಸಹ ಉಪ ವಿಭಾಗೀಯ ದಂಡಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಅವರ ಮುಂದೆ ದಾಖಲೆಗಳನ್ನು ಮಂಡಿಸಿ, ಕ್ರಮಕೈಗೊಳ್ಳಬಹುದು.

**7.ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೊಕದ್ದಮೆಗಳನ್ನು ಪರಿಶೀಲಿಸುವ ಬಗ್ಗೆ:-**

ಸರ್ಕಾರಿ ಇಲಾಖೆಗಳು, ಬೆಂಗಳೂರು ಮಹಾನಗರ ಪಾಲಿಕೆ, ಬಿಡಿಎ ಮತ್ತು ವಿವಿಧ ಸಂಘ-ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವರ್ಷಗಳವರೆಗೆ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಸರ್ಕಾರಿ ಇಲಾಖೆಗಳು ಮತ್ತು ಸಂಘ-ಸಂಸ್ಥೆಗಳು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಮುಖ ಪ್ರಕರಣಗಳನ್ನು ನಿಯತವಾಗಿ ಪರಿಶೀಲನೆ ಮಾಡುವ ಮೂಲಕ ಜಾಗೃತಿ ವಹಿಸಿ, ನ್ಯಾಯಾಲಯದ ಪ್ರಕರಣಗಳನ್ನು ಸಮರ್ಥಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಇಲಾಖೆಯು ಹೊಂದಿರುವ ಕಾನೂನು ಕೋಶವನ್ನು ಸಮರ್ಥವಾಗಿ ಕಾರ್ಯನಿರ್ವಹಿಸಲು ಚುರುಕುಗೊಳಿಸುವುದು.

**8.ಸಾರ್ವಜನಿಕ ಸ್ವತ್ತಿನ ರಕ್ಷಣೆ:-**

ಒತ್ತುವರಿಗಳು ಉಂಟಾಗುವುದಕ್ಕೆ ಪ್ರಮುಖ ಕಾರಣವೆಂದರೆ ಸಾರ್ವಜನಿಕ ಸಂಘ-ಸಂಸ್ಥೆಗಳಾದಂತಹ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಧಾರ್ಮಿಕ ಮತ್ತು ದತ್ತಿ ಇಲಾಖೆ, ವಕ್ಫ್ ಮಂಡಳಿ ಮುಂತಾದವುಗಳು ತಮ್ಮ ಸ್ವತ್ತಿಗೆ ರಕ್ಷಣೆ ಮಾಡಿಕೊಳ್ಳದಿರುವುದು. ಈ ಪ್ರವೃತ್ತಿ ಬೆಂಗಳೂರು ನಗರ ಜಿಲ್ಲೆಯಲ್ಲಿ 20,000 (ಇಪ್ಪತ್ತು ಸಾವಿರ ಎಕರೆ) ಎಕರೆಗೂ ಮೀರಿದ ಭೂಮಿಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ರಕ್ಷಣಾ ಇಲಾಖೆಯ ಕಾರ್ಯವೈಖರಿಗೆ ವ್ಯತಿರಿಕ್ತವಾಗಿದೆ.

ಆದರೆ, ರಕ್ಷಣಾ ಇಲಾಖೆಯ ಒಂದು ಎಕರೆ ಭೂಮಿ ಕೂಡ ಒತ್ತುವರಿಗೆ ಒಳಪಟ್ಟಿಲ್ಲ. ಏಕೆಂದರೆ ಅದು ತನ್ನ ಸ್ವತ್ತಿನ ಸುತ್ತ ತಪ್ಪದೆ ಬೇಲಿಹಾಕಿ ಅದಕ್ಕೆ ರಕ್ಷಣೆಯನ್ನೊದಗಿಸುತ್ತದೆ ಹೆಚ್ಚಿನ ಭೂಮಿಯನ್ನು ಹೊಂದಿದಾಗ್ಯೂ ಅದರಲ್ಲಿ ಬಹುತೇಕ ಭೂಮಿ ಒತ್ತುವರಿಗೆ

[illegible]
[illegible] ಆದರೂ [illegible] ಮಾಡಿಕೊಳ್ಳುವುದು [illegible]

[illegible] ಎನ್‌ಕ್ರೋಚ್ [illegible] ಅವಶ್ಯಕವಾಗಿರುತ್ತದೆ. ಸದರಿ ಅಧಿಕಾರಿಗಳು ಸಾರ್ವಜನಿಕ ಸ್ವತ್ತುಗಳು ಒತ್ತುವರಿಯಾಗದಂತೆ ನೋಡಿಕೊಳ್ಳುವುದು ಹಾಗೂ ಒತ್ತುವರಿಯಾದರೆ ತ್ವರಿತವಾಗಿ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿರುತ್ತದೆ. ಆದರೆ ಕೆಲವು ಇಲಾಖೆಗಳಲ್ಲಿ ಎನ್‌ಕ್ರೋಚ್ ಅಧಿಕಾರಿ ಹುದ್ದೆಗಳು ಇದ್ದರೂ, ಹುದ್ದೆಗಳಿಗೆ ಯಾರನ್ನು ನೇಮಿಸದಿರುವುದರಿಂದ ಭೂ ಕಬಳಿಕೆ ತಡೆಯುವುದು ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ ಕೆಲವು ಪ್ರಮುಖ ಇಲಾಖೆಗಳಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, [illegible] ಸಂಸ್ಥೆಗಳಿಗೆ ಎನ್‌ಕ್ರೋಚ್ ಅಧಿಕಾರಿ ಹುದ್ದೆಗಳನ್ನು ಸೃಷ್ಟಿ ಮಾಡುವುದು [illegible] ಮಾಡುವುದು ಅವಶ್ಯಕವಾಗಿರುತ್ತದೆ.

## 9. ಭೂ ಸ್ವಾಧೀನಗೊಂಡ ಭೂಮಿಯ ಬಳಕೆ ಬಗ್ಗೆ:-

ವಿವಿಧ ಉದ್ದೇಶಗಳಿಗಾಗಿ ಭೂಮಿ ಸ್ವಾಧೀನಪಡಿಸಿಕೊಂಡಿದ್ದು, ಅವನ್ನು 15-20 ವರ್ಷಗಳಾದರೂ ಭೂ ಸ್ವಾಧೀನಗೊಂಡ ಉದ್ದೇಶಕ್ಕೆ ಭೂಮಿ ಬಳಕೆಯಾಗದಿರುವುದರಿಂದ, ಭೂ ಒತ್ತುವರಿ ಕಬಳಿಕೆಗೆ ಅವಕಾಶವಾಗಿರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆಯೋ, ಆ ಉದ್ದೇಶಕ್ಕಾಗಿ ಕಾಲ ಮಿತಿಯೊಳಗೆ ಭೂ ಬಳಕೆಯಾಗುವಂತೆ ಸ್ಪಷ್ಟ ನಿಯಮಾವಳಿಯನ್ನು ರೂಪಿಸಬೇಕು.

## 10. ಭೂ ಮಂಜೂರಾತಿ ಮತ್ತು ಗುತ್ತಿಗೆ ಷರತ್ತು ಉಲ್ಲಂಘನೆ ಬಗ್ಗೆ:-

ಸರ್ಕಾರದ ವತಿಯಿಂದ ರಿಯಾಯಿತಿ ದರದಲ್ಲಿ ವಿವಿಧ ಸಾರ್ವಜನಿಕ ಉದ್ದೇಶಗಳಿಗಾಗಿ ಸರ್ಕಾರದ ಭೂಮಿಯನ್ನು ಮಂಜೂರಾತಿ/ಗುತ್ತಿಗೆಗೆ ಪಡೆದು, ವಾಣಿಜ್ಯ ಉದ್ದೇಶಗಳಿಗಾಗಿ ಬಳಕೆ ಮಾಡಿರುವುದು ಅಥವಾ ಮಾರಾಟ ಮಾಡಿರುವುದು ಮಂಜೂರಾತಿ ಷರತ್ತುಗಳ ಉಲ್ಲಂಘನೆಯಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಮಂಜೂರಾತಿ/ಗುತ್ತಿಗೆಯನ್ನು ರದ್ದುಪಡಿಸಿ ಭೂಮಿಯನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಳ್ಳುವುದು.

ಅನೇಕ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಆಸ್ತಿಯನ್ನು ಗುತ್ತಿಗೆಗೆ/ಬಾಡಿಗೆಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ನೀಡಿದ್ದು, ಗುತ್ತಿಗೆ/ಬಾಡಿಗೆ ಅವಧಿ ಪೂರ್ಣಗೊಂಡಿದ್ದರೂ, ಅವರನ್ನೇ ಮುಂದುವರೆಸಲಾಗಿದೆ. ಅಂತಹ ಸಂದರ್ಭಗಳಲ್ಲಿ ಗುತ್ತಿಗೆ/ಬಾಡಿಗೆಯನ್ನು ರದ್ದುಪಡಿಸಿ, ಆಯಾಯ ಸ್ಥಳಗಳ ಮಾರುಕಟ್ಟೆ ಬೆಲೆಯಲ್ಲಿ ಗುತ್ತಿಗೆ/ಬಾಡಿಗೆಯನ್ನು ನಿಗದಿಪಡಿಸುವುದರಿಂದ ಸರ್ಕಾರಕ್ಕೆ ಆಗುವ ಅಪಾರ ನಷ್ಟವನ್ನು ತಪ್ಪಿಸಿ, ಹೆಚ್ಚು ಆದಾಯ ಬರಲು ಕ್ರಮಕೈಗೊಳ್ಳುವುದು.

## 11. ಅಕ್ಕಪಕ್ಕದ ರಾಜ್ಯಗಳಲ್ಲಿ ಸಾರ್ವಜನಿಕ ಸ್ವತ್ತುಗಳ ರಕ್ಷಣೆ ಮಾಡುತ್ತಿರುವ ಬಗ್ಗೆ:-

ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, [illegible] ಅಧಿಕಾರಿಗಳು ಹೈದರಾಬಾದ್, ದೆಹಲಿ, ಮುಂಬಯಿ, ಅಹಮದಾಬಾದ್‌ನಂತಹ ಕೆಲವು ರಾಜ್ಯದ ರಾಜಧಾನಿ ನಗರಗಳಿಗೆ ಭೇಟಿ ನೀಡಬೇಕು ಮತ್ತು ಅಲ್ಲಿನ ಕಾರ್ಪೋರೇಷನ್‌ಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು, ಸಿಟಿ [illegible]ಗಳು, ಉದ್ಯಾನವನಗಳು, ಆಟದ

[illegible] ಅಸ್ತಿತ್ವದಲ್ಲಿರುವ ಕಾನೂನು ಉಪಬಂಧಗಳನ್ನು ಹೇಗೆ ಪರಿಣಾಮಕಾರಿ ಜಾರಿಗೊಳಿಸುತ್ತಿವೆ ಎಂಬುದನ್ನು ಮತ್ತು ನಗರ ಹಾಗೂ ಕಟ್ಟಡ ನಕ್ಷೆಗಳನ್ನು ನೀಡುವಲ್ಲಿ, ರಸ್ತೆಗಳನ್ನು ಅಗಲಗೊಳಿಸುವಲ್ಲಿ, ಕೆರೆಗಳನ್ನು ಸಂರಕ್ಷಿಸುವಲ್ಲಿ ಮುಂತಾದ ಕಾರ್ಯದಲ್ಲಿ ಹೇಗೆ ಎಚ್ಚರಿಕೆ ವಹಿಸಿ ಕ್ರಮ ಜರುಗಿಸುತ್ತಿವೆ ಎಂಬುದನ್ನು ಅಧ್ಯಯನ ಮಾಡಬೇಕು.

## 12 ಗೃಹ ನಿರ್ಮಾಣ ಸಹಕಾರ ಸಂಘಗಳು ಎಸಗಿರುವ ತೀವ್ರತರವಾದ ಹಾಗೂ ಕಾನೂನು ಬಾಹಿರವಾದ ಕ್ರಮಗಳ ಬಗ್ಗೆ:-

ಕೆಲವು ಗೃಹ ನಿರ್ಮಾಣ ಸಹಕಾರ ಸಂಘಗಳು ಜಾರಿಯಲ್ಲಿರುವ ನಿಯಮಗಳಿಗೆ ವಿರುದ್ಧವಾಗಿ ವ್ಯವಸಾಯದ ಜಮೀನುಗಳನ್ನು ಖರೀದಿಸಿ ವ್ಯವಸಾಯೇತರ ಉದ್ದೇಶಗಳಿಗಾಗಿ ಬಳಸಿರುತ್ತವೆ. ಸಂಬಂಧಿಸಿದ ಪ್ರಾಧಿಕಾರಗಳಿಂದ ಬಡಾವಣೆ ನಕ್ಷೆಗಳನ್ನು ಅನುಮೋದಿಸಿಕೊಳ್ಳದೆ, ಬಡಾವಣೆಗಳನ್ನು ರಚಿಸಿ, ಸಾರ್ವಜನಿಕ ಉದ್ದೇಶಗಳಿಗಾಗಿ ಮೀಸಲಿಡಬೇಕಾಗಿದ್ದ ಸ್ಥಳಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿರುತ್ತದೆ. ಅಷ್ಟೇ ಅಲ್ಲದೆ ಸಂಘದ ಜಮೀನನ್ನು ಜಂಟಿ ಅಭಿವೃದ್ಧಿ ಒಪ್ಪಂದಗಳ ಮೂಲಕ ಪರಭಾರೆ ಮಾಡಿದ್ದು, ಇನ್ನೂ ಕೆಲವು ಸಂದರ್ಭಗಳಲ್ಲಿ ಜಮೀನನ್ನು ಮಾರಾಟ ಮಾಡಲಾಗಿ ಕಾಯ್ದೆಗಳನ್ನು ಉಲ್ಲಂಘಿಸಲಾಗಿದೆ. ಅಂತಹ ಸಂಘಗಳ ವಿರುದ್ಧ ಸಹಕಾರ ಸಂಘಗಳ ಕಾಯ್ದೆಗನುಸಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಸೂಚಿಸುತ್ತದೆ.

ಈಗಾಗಲೇ ಸಂಘಗಳಲ್ಲಿ ಹಂಚಿಕೆ/ಮಾರಾಟ ಮಾಡಿರುವ ನಿವೇಶನಗಳು ಬೋಗಸ್ ಆಗಿದ್ದರೆ (ಬೋಗಸ್ ಸದಸ್ಯರುಗಳು ಸೇರಿ) ಅಥವಾ ಜಮೀನಿನ ಪರಭಾರೆಯು ಕಾಯ್ದೆಗನುಗುಣವಾಗಿಲ್ಲದಿದ್ದರೆ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಡಬೇಕಾಗಿದ್ದ ಸ್ಥಳಗಳ ದುರುಪಯೋಗವಾಗಿದ್ದರೆ, ಅಂಥಹವುಗಳನ್ನು ರದ್ದುಪಡಿಸಲು ಮತ್ತು ಮುಖ್ಯವಾಗಿ ಕಾಯ್ದೆಗನುಸಾರವಾಗಿ ಸಂಘಗಳು ಕಾರ್ಯನಿರ್ವಹಿಸಲು ನಿಗಾ ಇಡಬೇಕಾಗಿದ್ದ ಅಧಿಕಾರಿಗಳ ನಿರ್ಲಕ್ಷ್ಯತೆ/ಬೇಜವಾಬ್ದಾರಿ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

## 13. ಒತ್ತುವರಿಗಳನ್ನು ನಿಯಂತ್ರಿಸಲು ಖಾಯಂ ಕಾನೂನು ಪ್ರಾಧಿಕಾರ ರಚಿಸುವ ಕುರಿತು:-

ಬೆಂಗಳೂರು ಮಹಾನಗರ ಪ್ರದೇಶವು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿದ್ದು ತ್ವರಿತವಾಗಿ ಒಟ್ಟಾರೆ ನಗರೀಕರಣದತ್ತ ಸಾಗಿದೆ. ಈಗಾಗಲೇ ಇದರ ಜನಸಂಖ್ಯೆಯು ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿ ಸುಮಾರು 8 ಮಿಲಿಯನ್ ಆಗಿದ್ದು 2020ರ ವೇಳೆಗೆ 12 ಮಿಲಿಯನ್‌ಗೂ ಹೆಚ್ಚುತ್ತದೆ. ಬೆಂಗಳೂರು ಭಾರತದ "**ಬೂಮ್‌ಸಿಟಿ**" ಎಂದು ಪರಿಗಣಿತವಾಗಿದೆ ಹಾಗೂ ಟೈಮ್ ಮತ್ತು ನ್ಯೂಸ್‌ವೀಕ್ ಪತ್ರಿಕೆಗಳ ಸಮೀಕ್ಷೆ ವಿಶ್ವದಲ್ಲಿ ತ್ವರಿತವಾಗಿ ಬೆಳವಣಿಗೆಯಾಗುವ ಹತ್ತು ನಗರಗಳಲ್ಲಿ ಬೆಂಗಳೂರು ಕೂಡ ಒಂದು ಎಂದು ತಿಳಿಸಲಾಗಿದೆ. ಇದಕ್ಕೆ ಕಾರಣ ಬೆಂಗಳೂರಿನ ಹಿತಕರ ಹವಾಮಾನ (ಅದು ತ್ವರಿತವಾಗಿ ಬದಲಾವಣೆ ಆಗುತ್ತಿದ್ದಾಗ್ಯೂ) ತಾಂತ್ರಿಕ ನೈಪುಣ್ಯತೆಯುಳ್ಳ ಯುವ ಪದವೀಧರರ ಲಭ್ಯತೆ, ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳು, ಜನರ ಶಾಂತ ಸ್ವಭಾವದಿಂದಾಗಿ, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಉತ್ತಮವಾಗಿರುವುದು ಮತ್ತು ಅನೇಕ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ರಿಯಲ್ ಎಸ್ಟೇಟ್ ಅಭಿವೃದ್ಧಿದಾರರು ಬೆಂಗಳೂರಿನಲ್ಲಿ ಒಟ್ಟುಗೂಡಿದ್ದು ಇದರಿಂದ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಹೆಚ್ಚಿನ ಒತ್ತಡ ಉಂಟಾಗುತ್ತದೆ ನವದೆಹಲಿ ಮತ್ತು ಮುಂಬಯಿ ನಗರಗಳ ನಂತರ ದಕ್ಷಿಣ ಭಾರತದಲ್ಲಿ ಬೆಂಗಳೂರು

ಈಗಾಗಲೇ ಅತಿ ದುಭಾರಿ ನಗರವೆಂದು ಪರಿಗಣಿತವಾಗಿದೆ. ಪ್ರಸ್ತುತ ಮತ್ತು ಮುಂದಿನ ದಶಕಗಳಲ್ಲಿ ಈ ನಗರದ ತ್ವರಿತ ಅಭಿವೃದ್ಧಿಯಿಂದಾಗಿ ಕಟ್ಟಡಗಳಿಗಾಗಿ ಭೂಮಿ ಮೇಲಿನ ಒತ್ತಡವು ಸಾಕಷ್ಟು ಹೆಚ್ಚುವುದು. ಆದುದರಿಂದ, ಲಭ್ಯವಿರುವ ಪ್ರತಿಯೊಂದು ಸರ್ಕಾರಿ ಮತ್ತು ಸಾರ್ವಜನಿಕ ಭೂಮಿ, ಲಂಗ್‌ಸ್ಪೇಸ್, ಆಟದ ಮೈದಾನಗಳು, ಕೆರೆಯಂಗಳ ಮುಂತಾದವುಗಳ ಮೇಲೆ ಒತ್ತುವರಿಗಳು ಹೆಚ್ಚುವುದು ನಿಶ್ಚಿತ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ನಗರಸಭೆಗಳು, ಪುರಸಭೆ, ಪಂಚಾಯತಿಗಳು ಮತ್ತು ಇತರೆ ಸಂಸ್ಥೆಗಳಿಂದ ಮಾತ್ರವೇ ಇಂಥಹ ಒತ್ತಡವನ್ನು ನಿಯಂತ್ರಿಸಲು ಸಾಧ್ಯವಾಗದು. ಈಗಲೂ ಕೂಡ ಭೂಮಿಯ ಒತ್ತುವರಿಯನ್ನು ತಡೆಯಲು ಬೆಂಗಳೂರು ಮಹಾನಗರ ಪಾಲಿಕೆಯು ಡಿ.ಐ.ಜಿ. ದರ್ಜೆಯ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಎಸ್.ಪಿ.ದರ್ಜೆಯ ಪೊಲೀಸ್ ಅಧಿಕಾರಿ ನೇತೃತ್ವದ ಜಾಗೃತ ವಿಭಾಗವನ್ನು, ಕಂದಾಯ ಇಲಾಖೆಯು ಉಪವಿಭಾಗಾಧಿಕಾರಿಯ ನೇತೃತ್ವದಲ್ಲಿ ಭೂ ಒತ್ತುವರಿಗಳ ತಡೆ ಘಟಕವನ್ನು ಹೊಂದಿವೆ. ಆದರೆ, ಪ್ರತಿ ಸಂಸ್ಥೆಯು ತನ್ನ ಕೆಲಸಕಾರ್ಯವನ್ನು ಪ್ರತ್ಯೇಕವಾಗಿ · ನಿರ್ವಹಿಸುತ್ತಿವೆ ಮತ್ತು ಯಾವುದೇ ಒಂದು ಸಂಸ್ಥೆಯು ಸರ್ಕಾರದ ಮತ್ತು ಸಾರ್ವಜನಿಕ ಭೂಮಿಯನ್ನು ಮತ್ತು ಸ್ವತ್ತಿನ ಕಾನೂನು ಬಾಹಿರ ಅನುಭೋಗದಾರಿಕೆಯನ್ನು ತಡೆಗಟ್ಟಲು ಯಾವುದೇ ರೀತಿಯ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಸಮರ್ಥವಾಗಿಲ್ಲ.

ಆದುದರಿಂದ ಭೂಮಿಯ ಮತ್ತು ಸಾರ್ವಜನಿಕ ಸ್ವತ್ತುಗಳ ಒತ್ತುವರಿ ಹಾಗೂ ದುರ್ಬಳಕೆಯನ್ನು ತಡೆಗಟ್ಟಲು ಒಂದು ಖಾಯಂ ಕಾನೂನು ಪ್ರಾಧಿಕಾರವನ್ನು ರಚಿಸುವುದು ಅವಶ್ಯಕವಾಗಿದೆ. ಈ ಪ್ರಾಧಿಕಾರವು ಒತ್ತುವರಿ ಸಮಸ್ಯೆಯನ್ನು ಗುರುತಿಸಲು, ತೆರವುಗೊಳಿಸಲು ಮತ್ತು ಆ ಬಗ್ಗೆ ಪರಿಣಾಮಕಾರಿಯಾಗಿ ವ್ಯವಹರಿಸಿ, ನಿರ್ಬಂಧ ಕ್ರಮಗಳನ್ನು ಕೈಗೊಳ್ಳಲು ಕಾನೂನುಬದ್ಧ ಅಧಿಕಾರ ಹೊಂದಿರತಕ್ಕದ್ದು. ಈ ಪ್ರಾಧಿಕಾರಕ್ಕೆ, ಸರ್ಕಾರದ ಮತ್ತು ಶಾಸನಬದ್ಧ ಸಂಸ್ಥೆ ಸ್ವತ್ತುಗಳ ಒತ್ತುವರಿಗೆ ಸಂಬಂಧಿಸಿದಂತೆ ಅದು ಯುಕ್ತವೆಂದು ಭಾವಿಸುವ ಯಾರೇ ವ್ಯಕ್ತಿ ಸರ್ಕಾರಿ ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳಿಂದ ಮಾಹಿತಿಯನ್ನು ಅಗತ್ಯಪಡಿಸಲು ಮತ್ತು ಪಡೆಯಲು ಅಧಿಕಾರಗಳಿರತಕ್ಕದ್ದು. ಈ ಪ್ರಾಧಿಕಾರವು ಮೇಲ್ನೋಟದ ಆಧಾರದ ಮೇಲೆ ವಿಚಾರಣೆ ನಡೆಸಲು ಮತ್ತು ಪ್ರಕರಣಗಳನ್ನು ದಾಖಲು ಮಾಡಲು ನ್ಯಾಯಾಲಯಕ್ಕಿರುವ ಅಧಿಕಾರಗಳನ್ನು ಹೊಂದಿರತಕ್ಕದ್ದು. ಈ ಪ್ರಾಧಿಕಾರವು ಕರ್ನಾಟಕ ಪೊಲೀಸ್ ಅಧಿನಿಯಮ ಮತ್ತು ಭೂ ಕಂದಾಯ ಅಧಿನಿಯಮ, ಸಾರ್ವಜನಿಕ ಆವರಣಗಳಿಂದ ಹೊರಹಾಕುವ ಅಧಿನಿಯಮ, ಸಹಕಾರ ಸಂಘಗಳ ಅಧಿನಿಯಮ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ, ಕರ್ನಾಟಕ ಗೃಹ ಮಂಡಳಿ ಅಧಿನಿಯಮ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಬಿ.ಎಂ.ಆರ್.ಡಿ.ಎ., ನಗರಸಭೆ, ಪುರಸಭೆ ಗ್ರಾಮ · ಮತ್ತು ಪಟ್ಟಣ ಪಂಚಾಯ್ತಿಗಳ ಅಧಿನಿಯಮ ಮುಂತಾದಂಥಹ ಇತರ ಅಧಿನಿಯಮಗಳಡಿಯಲ್ಲಿ ಅಧಿಕಾರಗಳನ್ನು ಹೊಂದಿರತಕ್ಕದ್ದು. ಈ ಪ್ರಾಧಿಕಾರಕ್ಕೆ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಇಲ್ಲವೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ದರ್ಜೆಯ ವ್ಯಕ್ತಿಗಳು ಮುಖ್ಯಸ್ಥರಾಗಿರತಕ್ಕದ್ದು ಮತ್ತು ಇದು ಸಾಕಷ್ಟು ಪೊಲೀಸ್ ಹಾಗೂ ಆಡಳಿತಾತ್ಮಕ ಸಿಬ್ಬಂದಿ ವರ್ಗವನ್ನು ಹೊಂದಿರತಕ್ಕದ್ದು.

9. ಜಂಟಿ ಸದನ ಸಮಿತಿಯ ವರದಿ ಮತ್ತು ಶಿಫಾರಸ್ಸುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಒಬ್ಬ ಅಧಿಕಾರಿಯನ್ನು ನಿರ್ದಿಷ್ಟಪಡಿಸುವ ಬಗ್ಗೆ:-

ಜಂಟಿ ಸದನ ಸಮಿತಿಯು ಭೂ ಒತ್ತುವರಿಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ವರದಿ ಮತ್ತು ಪರಿಗಣಿತ ಶಿಫಾರಸ್ಸುಗಳನ್ನು ಮಧ್ಯಂತರ ವರದಿ ಭಾಗ-1ರಲ್ಲಿ ನೀಡಿರುತ್ತದೆ. ಸಮಿತಿಯ ವರದಿ ಮತ್ತು ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು [illegible] ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಒಬ್ಬರು ಉನ್ನತ ಅಧಿಕಾರಿಯನ್ನು ಈ ಉದ್ದೇಶಕ್ಕೆ ನಿರ್ದಿಷ್ಟಪಡಿಸಿ ಆದೇಶ ಹೊರಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಎ.ಟಿ. ರಾಮಸ್ವಾಮಿ
ಅಧ್ಯಕ್ಷರು
ಜಂಟಿ ಸದನ ಸಮಿತಿ
ಬೆಂಗಳೂರು ನಗರ/ನಗರ ಜಿಲ್ಲೆಯಲ್ಲಿ
ಸರ್ಕಾರಿ ಜಮೀನು ಒತ್ತುವರಿ ಕುರಿತು

ಡಿಸೋಜಾ ರಾಬಿನ್‌ಸನ್
ಪ್ರಧಾನ ಕಾರ್ಯದರ್ಶಿ.

2029-10

6 ೨೨೨೦೪·೨

# ಅನುಬಂಧ LCQ 1824(2112)

| ಜಿಲ್ಲೆಗಳ ಹೆಸರು | ಉತ್ತರ |
|---|---|

**ಬೆಂಗಳೂರು ನಗರ**

ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಿರುವ ಹಾಗೂ ಬಾಕಿ ಇರುವ ಪ್ರಕರಣಗಳ ವಿವರ ಈ ಕೆಳಕಂಡಿರುತ್ತದೆ.

| ಕ್ರ.ಸಂ | ತಾಲ್ಲೂಕು | ಅತಿಕ್ರಮಣಗೊಂಡ ಸರ್ಕಾರಿ ಜಮೀನ್ನನು ವಶಪಡಿಸಿಕೊಂಡಿರುವ ವಿವರ | ಅತಿಕ್ರಮಣ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|
| 1 | ಉತ್ತರ | 105-20 | 83 |
| 2 | ದಕ್ಷಿಣ | 39-08.02 | 108 |
| 3 | ಪೂರ್ವ | 64-28.02 | 63 |
| 4 | ಯಲಹಂಕ | 76-26 | 635 |
| 5 | ಆನೇಕಲ್ | 69-00 | 458 |
| **ಒಟ್ಟು** | | **355-02.04** | **1347** |

ಸರ್ಕಾರಿ ಜಮೀನುಗಳ ಒತ್ತುವರಿದಾರರ ವಿರುದ್ಧ ನೋಟೀಸ್ ನೀಡಿ ಪ್ರಕರಣ ದಾಖಲಿಸಿಕೊಂಡು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ಸದರಿ ಕ್ರಿಯಾ ಯೋಜನೆಯಂತೆ ಹಂತ ಹಂತವಾಗಿ ಪ್ರತಿ ವಾರದ ಕೊನೆಯ ಕರ್ತವ್ಯದ ದಿನದಂದು ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ ಹಾಗೂ ಒತ್ತುವರಿದಾರರ ವಿರುದ್ಧ ಸಂಭಂದಪಟ್ಟ ತಹಶೀಲ್ದಾರ್ ರವರ ಹಂತದಲ್ಲಿ ಕರ್ನಾಟಕ ಭೂಕಬಳಿಕ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲು ಕ್ರಮವಹಿಸಲಾಗಿರುತ್ತದೆ. ಸಹ ಹಾಕಿ ಒತ್ತುವರಿಯಿಂದ ತೆರವುಗೊಂಡಿರುವ ಪ್ರದೇಶಗಳಿಗೆ ತಂತಿಬೇಲಿ ಸಂರಕ್ಷಿಸಲಾಗಿರುತ್ತದೆ ಹಾಗೂ ಗೋಮಾಳ ಜಮೀನುಗಳನ್ನು ಸರ್ಕಾರದ ಸಾರ್ವಜನಿಕ ಉದ್ದೇಶಗಳಿಗೆ ವಿಲೇಗೊಳಿಸಲು ಕ್ರಮವಹಿಸಲಾಗಿರುತ್ತದೆ.

**ಬೆಂಗಳೂರು ಗ್ರಾಮಾಂತರ**

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಜಮೀನು ಅತಿಕ್ರಮಣ ಮಾಡಲಾಗಿರುವ ವಿವರ ಈ ಕೆಳಕಂಡಿರುತ್ತದೆ.

| ಕ್ರ.ಸಂ | ತಾಲ್ಲೂಕು | ಅತಿಕ್ರಮಣ ವಿಸ್ತೀರ್ಣ | ವಶಕ್ಕೆ ಪಡೆದಿರುವ ವಿಸ್ತೀರ್ಣ |
|---|---|---|---|
| 1 | ದೇವನಹಳ್ಳಿ | 183-23 | 99-21 |
| 2 | ದೊಡ್ಡಬಳ್ಳಾಪುರ | 82-06 | 82-06 |
| 3 | ಹೊಸಕೋಟೆ | 873-00 | 533-00 |
| 4 | ನೆಲಮಂಗಲ | 159-00 | 73-26 |
| **ಒಟ್ಟು** | | **1297-29** | 788-13 |

**ಬೆಂಗಳೂರು ದಕ್ಷಿಣ**

| ಕಳೆದ ಮೂರು ವರ್ಷಗಳಲ್ಲಿ ಒತ್ತುವರಿ ತೆರವುಗೊಳಸಿದ ವಿಸ್ತೀರ್ಣ | ಬಾಕಿ ಪ್ರಕರಣಗಳ ಸಂಖ್ಯೆ |
|---|---|
| **649-28** | **272** |

**ತುಮಕೂರು**

ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 6962-36 ಎ-ಗುಂಟೆ ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ.

ಬಾಕಿ ಇರುವ ಅತಿಕ್ರಮಣ ಪ್ರಕರಣಗಳ ಸಂಖ್ಯೆ: 1467

ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರವು ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ. ಆದರೆ ವಿಳಂಬಕ್ಕೆ ಆಸ್ಪದ ನೀಡದೇ ಕ್ರಮಕೈಗೊಳ್ಳಲಾಗುತ್ತಿರುತ್ತದೆ.

**ಕೋಲಾರ**

ಕಳೆದ 3 ವರ್ಷಗಳಲ್ಲಿ ನಮೂನೆ ಜಿ-8(ಸಿ) ರನ್ವಯ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 104 ರಡಿಯಲ್ಲಿ 5989-10 ಎ/ಗು ಜಮೀನನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ.

ಈ ಜಿಲ್ಲೆಯಲ್ಲಿ ಇನ್ನು 697 ಪ್ರಕರಣಗಳಲ್ಲಿ 2218-39 ಎ/ಗು ಸರ್ಕಾರಿ ಜಮೀನನ್ನು ತೆರವುಗೊಳಿಸಲು ಬಾಕಿ ಇದ್ದು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಭೂಮಾಪಕರ ಮುಖಾಂತರ ಅಳತೆ ಕಾರ್ಯ ಕೈಗೊಂಡು ಒತ್ತುವರಿಯನ್ನು ರಾಜಸ್ವ ನಿರೀಕ್ಷಕರ ಮುಖಾಂತರ ತೆರವುಗೊಳಿಸ ಲಾಗುವುದು.

**ಚಿಕ್ಕಬಳ್ಳಾಪುರ**

ಕಳೆದ 3 ವರ್ಷಗಳಲ್ಲಿ ನಮೂನೆ ಜಿ-8(ಸಿ) ರನ್ವಯ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 104 ರಡಿಯಲ್ಲಿ 180-02 ಎ/ಗು ಜಮೀನನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ ಈ ಜಿಲ್ಲೆಯಲ್ಲಿ ಇನ್ನು 573 ಪ್ರಕರಣಗಳಲ್ಲಿ, 770-12 ಸರ್ಕಾರವು ಎ/ಗು ಸರ್ಕಾರಿ ಜಮೀನನ್ನು ತೆರವುಗೊಳಿಸಲು ಬಾಕಿ ಇದ್ದು ಸದರಿ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕು ರವರಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಶೀಘ್ರವಾಗಿ ತೆರವುಗೊಳಿಸಲು ಸೂಚಿಸಲಾಗಿರುತ್ತದೆ.

<table>
<tr><td>ಚಿತ್ರದುರ್ಗ</td><td>ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 9798-27 ಎಕರ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ ಸದರಿ ಜಮೀನಿನ ಒತ್ತುವರಿ ಪ್ರಕರಣದ ಸ್ವರೂಪ, ನ್ಯಾಯಾಲಯದ ಆದೇಶಗಳನ್ನು ಪರಿಗಣಿಸಿಕೊಂಡು ಆದ್ಯತೆ ಮೇರೆಗೆ ನಿಯಮಾನುಸಾರ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 39 ಹಾಗೂ ಕಲಂ 104 ರನ್ವಯ ಅತಿಕ್ರಮಣವನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದ್ದು, ಒತ್ತುವರಿಯನ್ನು ತೆರವುಗೊಳಿಸಲು ಕಾಲಮಿತಿಯನ್ನು ನಿಗಧಿಪಡಿಸಿರುವುದಿಲ್ಲ.</td></tr>
<tr><td>ದಾವಣಗೆರೆ</td><td>ದಾವಣಗೆರೆ ಜಿಲ್ಲೆಯಲ್ಲಿ 5451-30.8 ಎಕರೆ ಜಮೀನನ್ನು ತೆರವುಗೊಳಿಸಲಾಗಿರುತ್ತದೆ. ಬಾಕಿ ಇರುವ ಅತಿಕ್ರಮಣ ಪ್ರಕರಣ ಸಂಖ್ಯೆ:421 ವಿಸ್ತೀರ್ಣ:953-14.08 ಇದ್ದು, ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಶಿವಮೊಗ್ಗ</td><td>ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 181-34 ಎಕರೆ ಸರ್ಕಾರಿ ಜಮೀನಿನ ಅತೀಕ್ರಮಣವನ್ನು ಹಾಗೂ 1962 ತೆರವುಗೊಳಿಸಲಾಗಿದೆ.</td></tr>
<tr><td>ಚಾಮರಾಜನಗರ</td><td>ಕಳೆದ 03 ವರ್ಷಗಳಲ್ಲಿ 2807.13 ಎಕರೆ ವಿಸ್ತೀರ್ಣದ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿರುತ್ತದೆ. ಬಾಕಿ ಇರುವ 1188 ಪ್ರಕಣಗಳನ್ನು ಒತ್ತುವರಿಯಿಂದ ತೆರವುಗೊಳಿಸಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.</td></tr>
<tr><td>ಕೊಡಗು</td><td>ಕಳೆದ 03 ವರ್ಷಗಳಲ್ಲಿ ಸರ್ಕಾರಿ ಜಮೀನಿನ ಅತಿಕ್ರಮಣ ತೆರವುಗೊಳಿಸಿದ ಪ್ರಕರಣಗಳು ಇರುವುದಿಲ್ಲ.<br>ಸರ್ಕಾರಿ ಜಮೀನಿನ ಅತಿಕ್ರಮಣ ತೆರವುಗೊಳಿಸಲು 173 ಪ್ರಕರಣಗಳು ಬಾಕಿ ಇರುತ್ತದೆ.</td></tr>
<tr><td>ಮಂಡ್ಯ</td><td>
<table>
<tr><th rowspan="2">ತಾಲ್ಲೂಕು</th><th colspan="2">ಒತ್ತುವರಿ ತೆರವುಗೊಳಿಸಿರುವ ಪ್ರಕರಣ ಸಂಖ್ಯೆ</th><th colspan="2">ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ</th></tr>
<tr><th>ಸಂಖ್ಯೆ</th><th>ವಿಸ್ತೀರ್ಣ</th><th>ಸಂಖ್ಯೆ</th><th>ವಿಸ್ತೀರ್ಣ</th></tr>
<tr><td>ಮಂಡ್ಯ</td><td>70</td><td>1288.00</td><td>1348</td><td>595-00</td></tr>
<tr><td>ಮದ್ದೂರು</td><td>145</td><td>1753.07</td><td>878</td><td>742.34</td></tr>
<tr><td>ಮಳವಳ್ಳಿ</td><td>37</td><td>659.08</td><td>14</td><td>174.12</td></tr>
<tr><td>ಪಾಂಡವಪುರ</td><td>31</td><td>60.00</td><td>243</td><td>508.11</td></tr>
<tr><td>ಶ್ರೀರಂಗಪಟ್ಟಣ</td><td>10</td><td>251.16</td><td>06</td><td>315.02</td></tr>
<tr><td>ನಾಗಮಂಗಲ</td><td>02</td><td>335.00</td><td>12</td><td>631.13</td></tr>
<tr><td>ಕೆ.ಆರ್.ಪೇಟೆ</td><td>670</td><td>885.00</td><td>93</td><td>106.00</td></tr>
<tr><td>ಒಟ್ಟು</td><td>965</td><td>5321.31</td><td>2594</td><td>3072.32</td></tr>
</table>
</td></tr>
<tr><td>ಹಾಸನ</td><td>1029 ಪ್ರಕರಣಗಳಲ್ಲಿ ಇಟ್ಟು 3323-13 ಎಕರೆ ಸರ್ಕಾರಿ ಜಮೀನು ಒತ್ತುವರಿಯಿಂದ ತೆರವುಗೊಳಿಸಲಾಗಿರುತ್ತದೆ. 18926 ಪ್ರಕರಣಗಳಲ್ಲಿ ಒಟ್ಟು 28242-24 ಎಕರೆ ಒತ್ತುವರಿ ತೆರವುಗೊಳಿಸಲು ಬಾಕಿ ಇರುತ್ತದೆ.</td></tr>
<tr><td>ಮೈಸೂರು</td><td>ಕಳೇದ 03 ವರ್ಷಗಳಲ್ಲಿ ಒಟ್ಟು 1243-32 ಎ/ಗುಂ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲು ಬಾಕಿ ಇರುತ್ತದೆ.</td></tr>
<tr><td>ಉಡುಪಿ</td><td>ಕಳೆದ 03 ವರ್ಷಗಳ್ಲಿ ಪ್ರಸ್ತುತ ಜಾರಿಯಲ್ಲಿರುವ ಒಟ್ಟು 28.13 ಎಕರೆ ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲಾಗಿರುತ್ತದೆ.<br>ಅತಿಕ್ರಮಣ ತೆರವುಗೊಳಿಸಲು ಬಾಕಿ ಇರುವ ಪ್ರಕಣಗಳು 509 (686.90 ಎ/ಗುಂ)<br>ಬಾಕಿ ಇರುವ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮವಹಿಸಲಾಗುತ್ತಿದೆ.</td></tr>
<tr><td>ಚಿಕ್ಕಮಗಳೂರು</td><td>
<table>
<tr><th>ತಾಲ್ಲೂಕು</th><th>ವಶಪಡಿಸಿಕೊಂಡಿರುವ ಭೂಮಿ</th></tr>
<tr><td>ಚಿಕ್ಕಮಗಳೂರು</td><td>44-06</td></tr>
<tr><td>ತರೀಕೆರೆ</td><td>27-37</td></tr>
<tr><td>ನ ರಾ ಪುರ</td><td>00-37</td></tr>
<tr><td>ಒಟ್ಟು</td><td>73-00</td></tr>
<tr><th colspan="2">ಬಾಕಿ ಇರುವ ಅತಿಕ್ರಮಣ ಪ್ರಕರಣಗಳ ವಿವರ</th></tr>
<tr><th>ತಾಲ್ಲೂಕು</th><th>ಬಾಕಿ ಇರುವ ಅತಿಕ್ರಮಣ ಪ್ರಕರಣಗಳ ಸಂಖ್ಯೆ</th></tr>
<tr><td>ಚಿಕ್ಕಮಗಳೂರು</td><td>2923</td></tr>
<tr><td>ಮೂಡಿಗೆರೆ</td><td>449</td></tr>
<tr><td>ಕೊಪ್ಪ</td><td>2532</td></tr>
<tr><td>ಕಳಸ</td><td>79</td></tr>
<tr><td>ಶೃಂಗೇರಿ</td><td>1079</td></tr>
<tr><td>ತರೀಕೆರೆ</td><td>123</td></tr>
<tr><td>ಕಡೂರು</td><td>571</td></tr>
<tr><td>ನ ರಾ ಪುರ</td><td>127</td></tr>
<tr><td>ಅಜ್ಜಂಪುರ</td><td>783</td></tr>
<tr><td>ಒಟ್ಟು</td><td>8666</td></tr>
</table>
</td></tr>
<tr><td>ದಕ್ಷಿಣ ಕನ್ನಡ</td><td>ಒಟ್ಟು 20.49 ಎಕರೆ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಿದ್ದಾರೆ.<br>159 ಅತಿಕ್ರಮಣ ಪ್ರಕರಣಗಳು ಬಾಕಿ ಇರುತ್ತದೆ.</td></tr>
<tr><td>ಯಾದಗಿರಿ</td><td>ಕಳೆದ 03 ವರ್ಷಗಳ್ಲಿ ತೆರವುಗೊಳಿಸಿರುವ ವಿವರ
<table>
<tr><th>ಕ್ರ. ಸಂ</th><th>ತಾ ಲೂಕು</th><th>ಒತ್ತುವರಿ ಪ್ರಕರಣಗ</th><th>ತೆರವು ಗೊಳಿ</th><th>ಬಾಕಿ</th><th>ಷರಾ</th></tr>
</table>
</td></tr>
</table>

| | | ಳ ಸಂಖ್ಯೆ | ಸಿದ ಸಂಖ್ಯೆ | | |
|---|---|---|---|---|---|
| 1 | ಯಾದಗಿರಿ | 128 | 0 | 128 | ಯಾದಗಿರಿ ತಾಲ್ಲೂಕಿನ 128 ಪ್ರಕರಣಗಳು ಕ.ಭೂ.ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತದೆ. |
| 2 | ಶಹಾಪೂರ | 158 | 30 | 128 | |
| 3 | ಸುರಪುರ | 153 | 04 | 149 | |
| 4 | ಗುರುಮಠಕಲ್ | 179 | 0 | 179 | |
| 5 | ವಡಗೇರಾ | 18 | 04 | 14 | |
| 6 | ಹುಣಸಗಿ | 50 | 30 | 20 | |
| | **ಒಟ್ಟು** | **686** | **68** | **618** | |

| | |
|---|---|
| ವಿಜಯನಗರ | 14508.75 ಎಕರೆ ತೆರವುಗೊಳಿಸಲಾಗಿದೆ ಹಾಗೂ ಕಳೆದ ಮೂರು ವರ್ಷಗಳಲ್ಲಿ ತೆರವು ಮಾಡಿರುವುದಿಲ್ಲ. & 4351.66 ಎಕರೆ ಬಾಕಿ ಇರುತ್ತದೆ. KPLC ಮಾರ್ಗಸೂಚಿಯಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಅತಿಕ್ರಮಣ ತೆರವು ಶಿಫಾರಸ್ಸು ಅನುಷ್ಠಾನ ಮಾಡುತ್ತಿದೆ. |
| ಬಳ್ಳಾರಿ | ಬಳ್ಳಾರಿ ಜಿಲ್ಲೆಯಲಲಿ ಕಳೆದ 03 ವರ್ಷಗಳಲ್ಲಿ ಸರ್ಕಾರಿ ಜಮೀನಿನ ಅತಿಕ್ರಮಣವಾಗಿರುವುದನ್ನು ತೆರವುಗೊಳಿಸಿರುವುದಿಲ್ಲ. ಜಿಲ್ಲೆಯ ಸರ್ಕಾರಿ ಜಮೀನಿನ ಒತ್ತುವರಿ/ತೆರವು ಬಾಕಿ ವಿವರ. |

| ಕ್ರ.ಸ | ತಾಲೂಕು | ಸರ್ಕಾರಿ ಜಮೀನು ಒತ್ತುವರಿ ವಿಸ್ತೀರ್ಣ | ಸರ್ಕಾರಿ ಜಮೀನು ತೆರವುಗೊಳಿಸಿದ ವಿಸ್ತೀರ್ಣ | ತೆರವುಗೊಳಿಸಲು ಬಾಕಿ ಇರುವ ವಿಸ್ತೀರ್ಣ |
|---|---|---|---|---|
| 1 | ಬಳ್ಳಾರಿ | 8375.37 | 2617.74 | 1003.72 |
| 2 | ಕುರುಗೋಡು | 1208.31 | 752.17 | 336.76 |
| 3 | ಕಂಪ್ಲಿ | 2124.41 | 559.09 | 584.62 |
| 4 | ಸಂಡೂರು | 39157.17 | 39157.17 | 0 |
| 5 | ಸಿರಗುಪ್ಪ | 2223.91 | 2223.91 | 0 |
| ಒಟ್ಟು | | 53089.17 | 45310.08 | 1924.56 |

| | |
|---|---|
| ಕೊಪ್ಪಳ | ಕಳೆದ 03 ವರ್ಷಗಳಲ್ಲಿ ತೆರವುಗೊಳಿಸಿರುವ ವಿವರ |

| ಕ್ರ. ಸಂ | ತಾಲ್ಲೂಕು | ಒತ್ತುವರಿ ಪ್ರಕರಣಗಳ ಸಂಖ್ಯೆ | ತೆರವುಗೊಳಿಸಿದ ಸಖ್ಯೆ | ಬಾಕಿ |
|---|---|---|---|---|
| 1 | ಕೊಪ್ಪಳ | 926-23 | 852-33 | 73-00 |
| 2 | ಗಂಗಾವತಿ | 498-12 | 498-12 | - |
| 3 | ಕುಷ್ಟಗಿ | 531-00 | 531-00 | - |
| 4 | ಯಲಬುರ್ಗಾ | 59-31 | 33-31 | 26-00 |
| 5 | ಕುಕನೂರು | 78-23 | 27-10 | 51-13 |
| 6 | ಕಾರಟಗಿ | 1059-16 | 1059-16 | - |
| 7 | ಕನಕಗಿರಿ | 92-00 | 92-00 | - |
| | **ಒಟ್ಟು** | **3245-26** | **3094-23** | **151-03** |

| | |
|---|---|
| ಬೀದರ್ | 3833 ಎಕರೆ ತೆರವುಗೊಳಿಸಲಾಗಿದೆ ಹಾಗೂ ಕಳೆದ 03 ವರ್ಷಗಳಿಂದ ತೆರವು ಮಾಡಿರುವುದಿಲ್ಲ. 5624 ಪ್ರಕರಣಗಳ 1507 ಎಕರೆ ತೆರವುಗೊಳಿಸಲು ಬಾಕಿ ಇರುತ್ತದೆ. KPLC ಮಾರ್ಗಸೂಚಿಯಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಅತಿಕ್ರಮಣ ತೆರವು ಶಿಫಾರಸ್ಸು ಅನುಷ್ಠಾನ ಮಾಡುತ್ತಿದೆ. |
| ಕಲಬುರ್ಗಿ | ಒಟ್ಟು ಪ್ರಕರಣಗಳು 924 ಇದ್ದು, ಇದರಲ್ಲಿ ಒಟ್ಟು ಜಮೀನು 9891.19 ಎ/ಗುಂ ಜಮೀನಿನಲ್ಲಿ ಇಲ್ಲಿಯವರೆಗೆ 7909.17 ಎ/ಗುಂ ಜಮೀನನ್ನು ಒತ್ತುವರಿ ತೆರವುಗೊಳಿಸಿದ್ದು, ಇನ್ನೂ ಬಾಕಿ ಇರುವ 1982-02 ಎ/ಗುಂ ಜಮೀನು ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಬಾಗಲಕೋಟೆ | ಒಟ್ಟು 6395 ಪ್ರಕರಣಗಲ್ಲಿ 1547-22 ಎ/ಗುಂ ವಿಸ್ತೀರ್ಣ ಒತ್ತುವರಿಯಾಗಿದ್ದು, ಈ ಪೈಕಿ ಈಗಾಗಲೇ 5468 ಪ್ರಕರಣಗಳಲ್ಲಿ 1243-18 ಎ/ಗುಂ ವಿಸ್ತೀರ್ಣದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.<br>ಇನ್ನು ಬಾಕಿ ಇರುವ 927 ಪ್ರಕರಣಗಳಲ್ಲಿ 304-04 ಎ/ಗುಂ ವಿಸ್ತೀರ್ಣ ಒತ್ತುವರಿಯನ್ನು ತೆರವುಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮವಹಿಸಲಾಗುತ್ತಿದೆ. |
| ಬೆಳಗಾವಿ | ಒಟ್ಟು 2348 ಪ್ರಕರಣಗಳಲ್ಲಿ 4399-05 ಎ/ಗುಂ ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ. ತೆರವುಗೊಳಿಸಲು ಬಾಬಿ ಇರುವ ಪ್ರಕರಣಗಳ ಸಂಖ್ಯೆ-237 ಕ್ಷೇತ್ರ 624-32 ಎ/ಗುಂ.<br>ಬಾಕಿ ಇರುವ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮವಹಿಸಲಾಗುತ್ತಿದೆ. |
| ವಿಜಯಪುರ | ಒಟ್ಟು 4736-32 ಎ/ಗುಂ ಸರ್ಕಾರಿ ಜಮೀನು ಒತ್ತುವರಿಗೊಂಡಿದ್ದು, ಈ ಪೈಕಿ 1730-04 ಎ/ಗುಂ ಜಮೀನಿನ |

| | |
|---|---|
| | ಒತ್ತುವರಿಯನ್ನು ತೆರವುಗೊಳಿಸಲಾಗಿದೆ.<br>ಬಾಕಿ ಇರುವ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮವಹಿಸಲಾಗುತ್ತಿದೆ. |
| ಧಾರವಾಡ | ಕಳೆದ 03 ವರ್ಷಗಳಲ್ಲಿ 29-38.08 ಎ/ಗು> ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದ್ದು, ಬಾಕಿ ಇರುವ ಅತಿಕ್ರಮಣ ಪ್ರಕರಣ ಸಂಖ್ಯೆ:403<br>ಸದರಿ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅತಿಕ್ರಮಣದಾರರ ವಿರುದ್ಧ ಮಾನ್ಯ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ತಹಶೀಲ್ದಾರರು ಪ್ರಕಣ ದಾಖಲಿಸಿರುತ್ತಾರೆ. |
| ಗದಗ | ಒಟ್ಟು 112 ಪ್ರಕ್ರಣಗಳಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಜಮೀನಿನ ಕ್ಷೇತ್ರ 1351-30 ಎ/ಗುಂ ಪೈಕಿ 110 ಪ್ರಕರಣಗಳಲ್ಲಿ 1288-03 ಎ/ಗುಂ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಿ ಕಂದಾಯ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ. 63-37 ಎ/ಗುಂ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲು ಕ್ರಿಯಾ ಯೋಜನೆ ರಚಿಸಿ ಕ್ರಮವಹಿಸಲಾಗುತ್ತಿದೆ. |
| ಉತ್ತರ ಕನ್ನಡ | ಒಟ್ಟು 733 ಪ್ರಕರಣಗಲ್ಲಿ 533-30-10.6 ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ. ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ:418.<br>ಒತ್ತುವರಿ ತೆರವುಗೊಳಿಸಲು ಕ್ರಿಯಾ ಯೋಜನೆ ರೂಪಿಸಿ ಅದರಂತೆ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ |
| ಹಾವೇರಿ | ಒಟ್ಟು 8344 ಪ್ರಕರಣಗಲ್ಲಿ 23047-36 ಎ/ಗುಂ ಸರ್ಕಾರಿ ಜಮೀನಿನ ಅತಕ್ರಮಣವನ್ನು ತೆರವುಗೊಳಿಸಲಾಗಿದೆ. ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ:51<br>ಸದರಿ ಪ್ರಕರಣಗಳು ಕ.ಭೂ.ಕಬಳಿಕೆ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವುದರಿಂದ ಅಂತಿಮ ಆದೇಶದನ್ವಯ ತೆರವುಗೊಳಿಸಲು ಕ್ರಮವಹಿಸಲಾಗುವುದು. |
| ರಾಯಚೂರು | ರಾಯಚೂರು ಜಿಲ್ಲೆಯ ಒಟ್ಟು 12 ಪ್ರಕರಣವನ್ನು ಅತಿಕ್ರಮಣವಾಗಿರುವುದನ್ನು ಗುರುತಿಸಿದ್ದು 12 ಪ್ರಕರಣಗಳನ್ನು ತೆರವುಗೊಳಿಸಲಾಗಿದೆ. |